ದೂರವಾಣಿ
Phone } 74227
Fax : 74242

ಮಂಗಳೂರು ವಿಶ್ವವಿದ್ಯಾನಿಲಯ
MANGALORE UNIVERSITY

ಕುಲಸಚಿವರ ಕಛೇರಿ,
ಮಂಗಳಗಂಗೋತ್ರಿ-574 199
Office of the Registrar
Mangalagangothri-574199

ಕ್ರಮಾಂಕ/No. ಮಂವಿ:ಎಸಿಸಿ:ಎವಫೆವಫೆ:21:ಎಸ್‌ಸಿಇ:97-98:ಎ4

ದಿನಾಂಕ/Date
30.12.199

# ಅಧಿಸೂಚನೆ

ಮಂಗಳೂರು ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಅಧಿನಿಯಮ 1976 (1976ರ ಕರ್ನಾಟಕ ಅಧಿನಿಯಮ ಸಂಖ್ಯೆ: 28)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅಧಿನಿಯಮ ಸಂಖ್ಯೆ 53(6)ನೇ ಪ್ರಕರಣದ ಪ್ರಕಾರ ವಿಶ್ವವಿದ್ಯಾನಿಲಯದ ಸಿಂಡಿಕೇಟ್, ಸ್ಥಳೀಯ ತನಿಖಾ ಸಮಿತಿ ಮತ್ತು ವಿದ್ಯಾಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ ಮತ್ತು ಈ ವಿಶ್ವವಿದ್ಯಾನಿಲಯವು ಗೊತ್ತುಪಡಿಸುವ ಷರತ್ತುಗಳಿಗೆ ಹಾಗೂ ಸರಕಾರವು ಪತ್ರ ಸಂಖ್ಯೆ ಇಡಿ 68 ಯುಡಿವಿ 97 ದಿನಾಂಕ 25.9.97ರ ಪತ್ರದಲ್ಲಿ ನಮೂದಿಸಿರುವ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು

1. ಸ್ಥಳೀಯ ಪರಿಶೀಲನಾ ಸಮಿತಿಯು ವಿಧಿಸಿರುವ ಪ್ರತಿಯೊಂದು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2. ವಿಶ್ವವಿದ್ಯಾನಿಲಯದ ಅನುಶಾಸನ ಪರಿನಿಯಮಾವಳಿ ಮತ್ತು ಅಧ್ಯಾದೇಶವನ್ನು ಕಾಲೇಜು ಅನುಸರಿಸತಕ್ಕದ್ದು.
3. ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಜಾರಿಯಲ್ಲಿರುವ ನಿಯಮಾವಳಿ ಮತ್ತು ಆದೇಶಗಳನ್ನು ಪಾಲಿಸತಕ್ಕದ್ದು.

ಕೆಳಕಂಡ ವ್ಯಾಸಂಗ ಕ್ರಮಗಳನ್ನು ಮತ್ತು ವಿಷಯಗಳನ್ನು ಕೆಳಕಂಡ ಕಾಲಾವಧಿಯವರೆಗೆ ಬೋಧಿಸುವುದಕ್ಕಾಗಿ ಸರ್ವೋದಯ ಶಿಕ್ಷಣ ಕಾಲೇಜು, ವಿರಾಜಪೇಟೆ ಎಂಬ ವಿದ್ಯಾಸಂಸ್ಥೆಗೆ 1997-98ನೇ ಸಾಲಿನಿಂದ ಶಾಶ್ವತ ಸಂಯೋಜನೆಯನ್ನು ನೀಡಲಾಗಿದೆ.

| ಕೋರ್ಸುಗಳು | ಪರಿಮಿತಿ | ಅವಧಿ |
|---|---|---|
| ಬಿ.ಎಡ್. ಡಿಗ್ರಿ ಕೋರ್ಸು | 100<br>ಒಂದು ನೂರು | 1997-98ನೇ ಸಾಲಿನಿಂದ |

ಕುಲಸಚಿವ.

ಪ್ರತಿಗಳು:

1. ಪ್ರಾಂಶುಪಾಲರು, ಸರ್ವೋದಯ ಕಾಲೇಜ್ ಆಫ್ ಎಜುಕೇಶನ್ ವಿರಾಜಪೇಟೆ-571218
2. ಕುಲಸಚಿವರು(ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ.
3. ಅಧೀಕ್ಷಕರು, ಸಿಂಡಿಕೇಟು/ಅಭಿವೃದ್ಧಿ ವಿಭಾಗಗಳು, ಮಂಗಳೂರು ವಿಶ್ವವಿದ್ಯಾನಿಲಯ.